**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ನ್ಯಾಯಾಲಯ, ಕಾರವಾರ.**

**ಸಿ.ಸಿ.ನಂಃ 603/2026**

**ಪಿ ಡಬ್ಲ್ಯೂಃ 01**

| | |
|---|---|
| ಸಾಕ್ಷಿದಾರರ ಹೆಸರು | ರಾಘವೇಂದ್ರ ಸಬರದ |
| ತಂದೆಯ ಹೆಸರು | ನಾಗೇಂಧ್ರ ಸಬರದ |
| ವಯಸ್ಸು | 41 ವರ್ಷ |
| ಉದ್ಯೋಗ | ಸಹಾಯಕ ಪ್ರಾಧ್ಯಾಪಕರು, KRIMS ವೈದ್ಯಕೀಯ ಕಾಲೇಜು, ಕಾರವಾರ. |
| ವಾಸ | ಕಾರವಾರ |

**(ಇಂದು ದಿನಾಂಕಃ 14.08.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

ಮಾನ್ಯ ಸರ್ವೋಚ್ಚ ನ್ಯಾಯಾಲಯದ (2014) 5 ಎಸ್.ಸಿ.ಸಿ. 590 ಇಂಡಿಯನ್ ಬ್ಯಾಂಕ್ಸ್ ಅಸೋಷಿಯೇಶನ್ ವಿರುದ್ಧ ಯುನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿನ ತೀರ್ಪನ್ನು ಆಧರಿಸಿ ಈ ಪ್ರಕರಣದಲ್ಲಿ ಫಿರ್ಯಾದುದಾರ ಪರ ವಕೀಲರು ಸಲ್ಲಿಸಿರುವ ಜ್ಞಾಪನವನ್ನು ಪರಿಗಣಿಸಿ, ಈ ಹಿಂದೆ ಫಿರ್ಯಾದುದಾರರು ತಮ್ಮ ಸ್ವ ಪ್ರತಿಜ್ಞಾ ಹೇಳಿಕೆಯ ಸಲುವಾಗಿ ಸಲ್ಲಿಸಿದ್ದ ಪ್ರಮಾಣ ಪತ್ರವನ್ನು ಫಿರ್ಯಾದುದಾರರ ಪರ ಸಾಕ್ಷ್ಯವನ್ನಾಗಿ ಪರಿಗಣಿಸಲಾಯಿತು. ಈ ಪ್ರಕರಣದಲ್ಲಿ ಸ್ವ ಪ್ರತಿಜ್ಞಾ ಹೇಳಿಕೆಯನ್ನು ದಾಖಲಿಸುವಾಗ ಫಿರ್ಯಾದಿಯೊಂದಿಗೆ ಸಲ್ಲಿಸಲಾದ ದಾಖಲೆಗಳನ್ನು ಈಗಾಗಲೇ ನಿಪಿ–1 ರಿಂದ ನಿಪಿ–5 ಅಂತಾ ಗುರುತಿಸಿರುವುದರಿಂದ ಅವುಗಳನ್ನು ಪುನಃ ನಿಶಾನೆಗೊಳಿಸಿರುವುದಿಲ್ಲ.

(7. ಫಿರ್ಯಾದುದಾರರ ಎಸ್.ಬಿ.ಐ. ಕಾರವಾರ ಶಾಖೆಯ ಎಸ್. ಬಿ. ಖಾತೆಯ ಸ್ಟೇಟಮೆಂಟ ಆಫ್ ಅಕೌಂಟನ್ನು ನಿಪಿ–6, ಎಂದು ಗುರುತಿಸಲಾಯಿತು.)

**<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರು ಎನ್ ಐ ಆಕ್ಟ ನ ಕಲಂ 145(2) ರಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಿ, ಪಾಟೀ ಸವಾಲಿಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ಸಹಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ., ಕಾರವಾರ.**